## ದಿನಾಂಕ:29-10-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 13 (128)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 172 (ಹಳೆ ವಾರ್ಡ್ ಸಂಖ್ಯೆ: 66) ಮಡಿವಾಳ, ತಾವರೆಕೆರೆ ಮುಖ್ಯರಸ್ತೆಯ ಸರ್ವೆ ನಂ. 108/3 ಎ ರಲ್ಲಿನ ಸ್ವತ್ತಿನ ಸಂಖ್ಯೆ: 20 ರ ಪೈಕಿ 35.91 ಚ.ಅ. ಮತ್ತು ಸ್ವತ್ತಿನ ಸಂಖ್ಯೆ: 20 'ಎ' ರ ಪೈಕಿ 89.39 ಚ.ಅ. ಗಳ ಒಟ್ಟು ಖಾಲಿ ಜಾಗ 125.29 ಚ.ಅ. ಮತ್ತು ಅವುಗಳಲ್ಲಿರುವ 127.52+82.45=209.97 ಚ.ಅ. ವಿಸ್ತೀರ್ಣದ ಎಸಿ ಷೀಟಿನ ಕಟ್ಟಡವನ್ನು ಸಾರ್ವಜನಿಕ ಸೌಲಭ್ಯಕ್ಕಾಗಿ ಅಂದರೆ ಒಳಚರಂಡಿ ನಿರ್ಮಾಣ ಮತ್ತು ರಸ್ತೆ ಅಗಲೀಕರಣದ ಸಲುವಾಗಿ ಭೂಮಾಲೀಕರ ಮೌಖಿಕ ಒಪ್ಪಿಗೆ ಮೇರೆಗೆ ಜಾಗವನ್ನು ಉಪಯೋಗಿಸಿಕೊಂಡು, ಖಾಲಿ ನಿವೇಶನಕ್ಕೆ ಚ.ಅ. 1 ಕ್ಕೆ ರೂ.450/- ಗಳಂತೆ ಮತ್ತು ಕಟ್ಟಡಕ್ಕೆ ಚ.ಅ. 1ಕ್ಕೆ ರೂ.190/- ಗಳಂತೆ ಮತ್ತು ಇತರೆ ವೆಚ್ಚ ಸೇರಿ ಒಟ್ಟು ರೂ.2,08,852/- ಗಳನ್ನು ಭರಿಸಲು ದಿನಾಂಕ: 24-02-2005 ರಂದು ನಡೆದ ಮಹಾನಗರ ಪಾಲಿಕೆಯ ಸಭೆಯಲ್ಲಿ, ವಿಷಯ ಸಂಖ್ಯೆ: 38(198) ರಲ್ಲಿ ತೀರ್ಮಾನವಾಗಿರುತ್ತದೆ.

ಪಾಲಿಕೆಯ ಈ ತೀರ್ಮಾನಕ್ಕೆ ಸರ್ಕಾರವು ಪತ್ರ ಸಂಖ್ಯೆ: ನಅಇ-93-ಎಂಎಸ್‌ಜಿ-2005, ದಿನಾಂಕ:09-06-2005 ರಂತೆ ಅನುಮೋದನೆ ನೀಡಿರುತ್ತದೆ.

ಸರ್ಕಾರದ ಈ ಅನುಮೋದನೆಯನ್ನು ಅನುಸರಿಸಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು, ಇವರು ಭೂಸ್ವಾಧೀನ ಕಾಯ್ದೆಯ ಕಲಂ 4(1) ಘೋಷಣೆಯನ್ನು ದಿನಾಂಕ:29-06-2006 ರಂದು ಹೊರಡಿಸಿರುತ್ತಾರೆ ಹಾಗೂ ಜಂಟಿ ಅಳತೆ ಕಾರ್ಯ ಪೂರೈಸಿ ವರದಿ ನೀಡಿರುತ್ತಾರೆ.

ಆದರೆ, ಜಂಟಿ ಅಳತೆ ಕಾರ್ಯದಲ್ಲಿ ಈ ಕೆಳಗೆ ಕಾಣಿಸಿರುವಂತೆ ಹೆಚ್ಚಿನ ವಿಸ್ತೀರ್ಣವನ್ನು ಉಪಯೋಗಿಸಿಕೊಂಡು ಒಳಚರಂಡಿ ಮತ್ತು ರಸ್ತೆ ನಿರ್ಮಾಣ ಮಾಡಿರುವುದು ಕಂಡು ಬಂದಿರುತ್ತದೆ.

| ಗ್ರಾಮದ ಹೆಸರು | ಸರ್ವೆ ನಂ. | ಸ್ವತ್ತಿನ ಸಂಖ್ಯೆ | ಖಾತೆದಾರರ ಹೆಸರು | ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಘೋಷಣೆಯನ್ವಯ ಘೋಷಿಸಿರುವ ವಿಸ್ತೀರ್ಣ (ಚ.ಅ.) | ಜಂಟಿ ಅಳತೆಯಂತೆ, ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕೆ ಉಪಯೋಗಿಸಿಕೊಂಡ ವಿಸ್ತೀರ್ಣ ಚ.ಅ. | ಹೆಚ್ಚುವರಿ ಉಪಯೋಗಿಸಿಕೊಡ ವಿಸ್ತೀರ್ಣ (ಚ.ಅ. |
|---|---|---|---|---|---|---|
| ತಾವರೆ ಕೆರೆ | 108/3 | 20 ಎ ಪೈಕಿ | ಹನುಮಂತ ರೆಡ್ಡಿ | 89.38 | 200 ಚ.ಅ. | 110.62 ಚ.ಅ. |
| ತಾವರೆ ಕೆರೆ | 108/3 | 20 ರ ಪೈಕಿ | ಯಲ್ಲಮ್ಮ ಕೋಂ ಹನುಮಂತ ರೆಡ್ಡಿ | 35.91 | 208 ಚ.ಅ. | 172.09 ಚ.ಅ. |
| ಒಟ್ಟು | | | | **125.29** | **408 ಚ.ಅ.** | **282.71** |

.....................2

ಆದರೂ, ವಿಶೇಷ ಭೂಸ್ವಾಧೀನಾಧಿಕಾರಿಗಳು ಸದರಿ ಸ್ವತ್ತಿಗೆ 4(1) ರ ಅಧಿಸೂಚನೆ ಹೊರಡಿಸುವ ಸಮಯದಲ್ಲಿ ಇದ್ದ ವಿಸ್ತೀರ್ಣಕ್ಕೆ 6(1) ರ ಘೋಷಣೆಯನ್ನು ಹೊರಡಿಸಬೇಕಾಗುತ್ತದೆ ಎಂದು ತೀರ್ಮಾನಿಸಿ ಅದರಂತೆ, ದಿನಾಂಕ:24/08/2007 ರಂದು ಭೂಸ್ವಾಧೀನ ಕಾಯ್ದೆಯ ಕಲಂ 6(1) ರ ಘೋಷಣೆಯನ್ನು ಹೊರಡಿಸಿರುತ್ತಾರೆ. 6(1) ರ ಅಧಿಸೂಚನೆಯಲ್ಲಿ ನಮೂದಿಸಿರುವ 125.29 ಚ.ಅ. ಜಾಗ ಮತ್ತು ಅದರಲ್ಲಿರುವ 209.91 ಚ.ಅ. ಎಸಿ ಷೀಟಿನ ಮನೆಗೆ ದಿನಾಂಕ:25/05/2008 ರಂದು ಐ-ತೀರ್ಪು ರಚಿಸಿ ಒಟ್ಟು 3,88,505-00 ಗಳನ್ನು ಪಾವತಿಸಿರುತ್ತಾರೆ.

ಆದರೆ, ಒಳಚರಂಡಿ ನಿರ್ಮಾಣ ಮತ್ತು ರಸ್ತೆ ಅಗಲೀಕರಣಕ್ಕೆ ಹೆಚ್ಚುವರಿಯಾಗಿ ಉಪಯೋಗಿಸಿಕೊಳ್ಳಲಾಗಿರುವ 282.71 ಚ.ಅ. ವಿಸ್ತೀರ್ಣಕ್ಕೆ ಭೂಪರಿಹಾರವನ್ನು ಖಾತೆದಾರರಿಗೆ ಪಾವತಿಸಬೇಕಾಗಿರುವುದರಿಂದ, ಸದರಿ ಸ್ವತ್ತಿಗೆ 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪ್ರಕ್ರಿಯೆ ನಡೆಸಬೇಕಾಗಿರುತ್ತದೆ. ಆದ್ದರಿಂದ, ಸದರಿ ಭೂಸ್ವಾಧೀನಕ್ಕೆ ತಗಲುವ ಭೂಪರಿಹಾರದ ಅಂದಾಜು ವೆಚ್ಚವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**"ಅ"**

| | | |
|---|---|---|
| 1 | ಭೂಮಿಯ ಮೌಲ್ಯ - 282.71 ಚ.ಅ. ಗೆ,<br>(ಸರ್ಕಾರದ ಅಧಿಸೂಚನೆ ದಿ:19/04/1997 ರ ಮಾರ್ಗಸೂಚಿ ದರ ಚ.ಅ. 1ಕ್ಕೆ 2,500/- ರೂ.ಗಳಂತೆ) | 7,06,775-00 |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | 84,813-00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ. 30 ರಂತೆ | 2,12,032-00 |
| | **ಒಟ್ಟು** | **10,03,620-00** |

**"ಆ"**

| | | |
|---|---|---|
| 1 | ಶೇಕಡ 10 ರಷ್ಟು ಆಡಳಿತ ವೆಚ್ಚ | 1,00,362-00 |
| 2 | ಶೇಕಡ 1 ರಷ್ಟು ಆಡಿಟ್ ವೆಚ್ಚ | 10,036-00 |
| 3 | ಪ್ರಕರಣಾ ವೆಚ್ಚ | 1,00,000-00 |
| | ಒಟ್ಟು | 2,10,398-00 |
| | **(ಅ+ಆ) ಒಟ್ಟು** | **12,14,018-00** |

**(ಹನ್ನೆರಡು ಲಕ್ಷದ ಹದಿನಾಲ್ಕು ಸಾವಿರದ ಹದಿನೆಂಟು ರೂಪಾಯಿಗಳು ಮಾತ್ರ)**

..........................3

ಮೇಲ್ಕಂಡ ಸ್ವತ್ತನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರದ ಮತ್ತು ಇತರೆ ಅಂದಾಜು ವೆಚ್ಚಗಳು ಸೇರಿ ಒಟ್ಟು ರೂ. **12,14,018–00 (ಹನ್ನೆರಡು ಲಕ್ಷದ ಹದಿನಾಲ್ಕು ಸಾವಿರದ ಹದಿನೆಂಟು ರೂಪಾಯಿಗಳು ಮಾತ್ರ)** ಗಳಾಗಿದ್ದು, ಈ ಮೊತ್ತವನ್ನು ಪಾಲಿಕೆಯಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25–09–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12–10–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12–10–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12–10–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ. ನಟರಾಜ)**

ಮಹಾಪೌರರು